## -: ವಾರ್ಡ್ ಸಮಿತಿ ಸಭೆ :-

## ದಿನಾಂಕ: 20.02.2021

ವಿಷಯ: ವಾರ್ಡ್ ಸಂಖ್ಯೆ 74 ಶಕ್ತಿಗಣಪತಿನಗರ ವಾರ್ಡ್ ಸಮಿತಿ ಸಭೆಯನ್ನು ಏರ್ಪಡಿಸಿರುವ ಬಗ್ಗೆ.
ಉಲ್ಲೇಖ: ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಕಛೇರಿ ಆದೇಶ ಪತ್ರ ಸಂಖ್ಯೆ: ಬಿ12(5)/ಪಿ.ಆರ್/35/ 2020-21 ದಿನಾಂಕ: 21.09.2020

ದಿನಾಂಕ 20.02.2021 ರಂದು ಸಮಯ ಬೆಳಿಗ್ಗೆ 10.00 ಗಂಟೆಗೆ ವಾರ್ಡ್ ಸಂಖ್ಯೆ 74 ಶಕ್ತಿಗಣಪತಿನಗರ ವಾರ್ಡ್ ಸದಸ್ಯರ ಕಛೇರಿಯಲ್ಲಿ ವಾರ್ಡ್ ಸಮಿತಿ ಸಭೆಯನ್ನು ಮಾನ್ಯ ವಾರ್ಡ್ ಕಮಿಟಿ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಕರೆಯಲಾಯಿತು.

ಹಾಜರಿದ್ದ ಅಧಿಕಾರಿಗಳು:-

1. ಶ್ರೀ ಚಂದ್ರಶೇಖರ್ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, (ಅಧ್ಯಕ್ಷರು)
2. ಶ್ರೀ ಕೆ.ಬಿ. ದೇವರಾಜಯ್ಯ ಸಹಾಯಕ ಅಭಿಯಂತರರು, (ಕಾರ್ಯದರ್ಶಿ)
3. ಸಹಾಯಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ.
4. ಶ್ರೀ ಪ್ರದೀಪ್ ಕುಮಾರ್, ಹಿರಿಯ ಆರೋಗ್ಯ ಪರಿವೀಕ್ಷಕರು
5. ಶ್ರೀ ಕೆ. ಜಾಕಬ್, ಕಿರಿಯ ಆರೋಗ್ಯ ಪರಿವೀಕ್ಷಕರು
6. ಡಾ॥ ಕುಸುಮ,
7. ಪ್ರಕಾಶ್, ಬೀದಿ ದೀಪಗಳ ನಿರ್ವಹಣೆ,
8. ವೆಂಕಟೇಶ್, ಕಂದಾಯ ಪರಿವೀಕ್ಷಕರು
9. ಜಿ. ವೆಂಕಟೇಶ್ ಕಂದಾಯ ವಸೂಲಿಗಾರರು,
10. ಪ್ರಶಾಂತ್, ಮಾರ್ಷಲ್
11. ಶ್ರೀ ನಾಗರಾಜ್, ಸೂಪರ್‌ವೈಸರ್, ಘನತ್ಯಾಜ್ಯ ನಿರ್ವಹಣೆ,
12. ರಫೀಕ್ ಅಹಮದ್,

ಹಾಜರಿದ್ದ ವಾರ್ಡ್ ಕಮಿಟಿ ಸದಸ್ಯರು:-

1. ಶ್ರೀ ಬಿ.ಡಿ. ಶ್ರೀನಿವಾಸ್
2. ಶ್ರೀ ಕೆ.ಪಿ. ಅಶೋಕ್
3. ಶ್ರೀ ರವಿಕುಮಾರ್
4. ಶ್ರೀ ಜಿ. ಸತ್ಯನಾರಾಯಣ
5. ಶ್ರೀ ರಾಜೇಶ್ ಶಾಸ್ತ್ರಿ
6. ಶ್ರೀಮತಿ ಲಲಿತಮ್ಮ
7. ಶ್ರೀಮತಿ ಇಂದ್ರಮ್ಮ
8. ಶ್ರೀ ನಾಗರಾಜು
9. ಶ್ರೀ ಹೇಮಂತ್
10. ಎನ್.ಜಿ. ಗೋವಿಂದಯ್ಯ

......2

Scanned with CamScanner

Scanned with CamScanner

ಶ್ರೀ ಕೆ.ಬಿ. ದೇವರಾಜಯ್ಯ ಸಹಾಯಕ ಅಭಿಯಂತರರು ಹಾಗೂ ಕಾರ್ಯದರ್ಶಿಗಳು ರವರು ಮಾನ್ಯ ಅಧ್ಯಕ್ಷರು ಹಾಗೂ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸಲಾಯಿತು. ಸಭೆಯಲ್ಲಿ ಈ ಕೆಳಕಂಡ ಅಂಶಗಳನ್ನು ಚರ್ಚಿಸಲಾಯಿತು.

1. ಅಂಗನಾಡಿ ಕೇಂದ್ರವನ್ನು ಶೀಘವಾಗಿ ಕಾರ್ಯನಿರ್ವಹಿಸಲು ಅನುವು ಮಾಡಿಕೊಡಲು ಸೂಚಿಸಿರುತ್ತಾರೆ.
2. ಶನಿಮಹಾತ್ಮ ದೇವಸ್ಥಾನದ ಎದುರು ಇರುವ ಅಡ್ಡಮೋರಿಯು ಮಣ್ಣಿನಿಂದ ಮುಚ್ಚಿಹೋಗಿದ್ದು ಶೀಘ್ರದಲ್ಲಿ ಹೂಳನ್ನು ತೆಗೆದು ಹೊಸದಾಗಿ ಅಡ್ಡಮೋರಿ ನಿರ್ಮಿಸಿಕೊಡಲು ಹಾಜರಿದ್ದ ಸದಸ್ಯರು ಕೋರಿರುತ್ತಾರೆ.
3. ವೃಷಭಾವತಿ ವ್ಯಾಲಿಯಲ್ಲಿ ಬೃಹತ್ ಮಳೆನೀರುಗಾಲುವೆ ಮಧ್ಯಭಾಗದಲ್ಲಿ ಬೆಂಗಳೂರು ನೀರು ಸಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ಒಳಚರಂಡಿ ಕೊಳವೆ ಸಾಲುಗಳನ್ನು ಅಳವಡಿಸುತ್ತಿದ್ದು ಅಡ್ಡರಸ್ತೆಗಳ ಒಳಚರಂಡಿ ಕೊಳವೆ ಸಾಲುಗಳನ್ನು ಮುಖ್ಯ ಕೊಳವೆ ಲೈನ್‌ಗೆ ಸಂಪರ್ಕ ಕಲ್ಪಿಸಲು ಕೋರಿರುತ್ತಾರೆ.
4. ಕೆಲವು ಪ್ರದೇಶಗಳಲ್ಲಿ ಸಿ.ಸಿ. ಕ್ಯಾಮೆರಾ ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ ಹಾಗೂ ನಿರ್ವಹಣೆ ಸಮರ್ಪಕವಾಗಿರುವುದಿಲ್ಲ ಎಂದು ತಿಳಿಸಿರುತ್ತಾರೆ.
5. ಘನತ್ಯಾಜ್ಯ ನಿರ್ವಹಣೆ ಸಮರ್ಪಕವಾಗಿ ನಿರ್ವಹಿಸುತ್ತಿರುವುದಿಲ್ಲ ಎಂದು ತಿಳಿಸಿದ್ದು ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಘನತ್ಯಾಜ್ಯ ನಿರ್ವಹಣೆಯ ಸೂಪರ್‌ವೈಸರ್ ರವರಿಗೆ ಸೂಕ್ತ ಕ್ರಮವಹಿಸಲು ಸೂಚಿಸಲಾಯಿತು.
6. ಮುಖ್ಯ ರಸ್ತೆಗಳಲ್ಲಿ ಅನಧಿಕೃತವಾಗಿ ಅಳವಡಿಸಿರುವ ಬ್ಯಾನರ್‌ಗಳನ್ನು ತೆರವುಗೊಳಿಸಲು ಸೂಚಿಸಲಾಯಿತು
7. ಚಂದ್ರಪ್ಪ ರಸ್ತೆ ಹಾಗೂ ಅಡ್ಡರಸ್ತೆಗಳಲ್ಲಿ ಬೀದಿ ದೀಪಗಳು On/Off ಸರಿಯಾಗಿಲ್ಲದಿರುವುದರಿಂದ ಎಂದು ದೂರು ಬಂದ ಹಿನ್ನೆಲೆಯಲ್ಲಿ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿರುತ್ತಾರೆ.
8. ಕಮಲಾನಗರ ಕೊಳಚೆ ಪ್ರದೇಶದ ಶಾಲಾ ಕಟ್ಟಡವನ್ನು ನೂತನವಾಗಿ ನಿರ್ಮಿಸಲು ಮತ್ತು ನವೀಕರಿಸಲು ಬಿಟ್ಟುಕೊಡಲಾಗಿದ್ದು ಪ್ರಸ್ತುತ ಸದರಿ ಕಾಮಗಾರಿ ಬಹುತೇಕ ಪೂರ್ಣಗೊಂಡಿದ್ದು, ಶೀಘ್ರದಲ್ಲಿ ಪೂರ್ಣಗೊಳಿಸಿ ಹಸ್ತಾಂತರಿಸಲು ಶಾಲಾ ಮುಖ್ಯೋಪಾಧ್ಯಾಯರು ಕೋರಿರುತ್ತಾರೆ.

ಅಧ್ಯಕ್ಷರು ಸಭೆಯನ್ನು ಉದ್ದೇಶಿಸಿ ಎಲ್ಲಾ ಇಲಾಖೆಗಳು ಪರಸ್ಪರ ಚರ್ಚಿಸಿ ಇಲಾಖೆಗೆ ಸಂಬಂಧಪಟ್ಟ ಎಲ್ಲಾ ಕೆಲಸ ಕಾರ್ಯಗಳನ್ನು ನಿರ್ವಹಿಸಬೇಕು ಎಂದು ಸೂಚಿಸಿದರು.

ಸಹಾಯಕ ಅಭಿಯಂತರರು
ಮತ್ತು ಕಾರ್ಯದರ್ಶಿಗಳು,
ವಾರ್ಡ್ ನಂ. 74 ಶಕ್ತಿಗಣಪತಿನಗರ

20/7/2021
ಅಧ್ಯಕ್ಷರು
ವಾರ್ಡ್ ಕಮಿಟಿ, ವಾರ್ಡ್ ಸಂಖ್ಯೆ 74,
ಶಕ್ತಿಗಣಪತಿನಗರ

Scanned with CamScanner

Scanned with CamScanner